

# ಅಬು ಮಡಿಲಲ್ಲಿ ನಗುವ ನಕ್ಕಿ ಸರೋವರ

**ಅಬು ಪರ್ವತಾವಳಿಗಳ ನಡುವಿನಲ್ಲಿ ತಿಳಿ ನೀರಿನಿಂದ ಕಂಗೊಳಿಸುವ 'ನಕ್ಕಿ ಸರೋವರ', ರಾಜಸ್ಥಾನದ ಪ್ರಮುಖ ಪ್ರವಾಸಿತಾಣಗಳಲ್ಲೊಂದು.**

■ ಶೇಖರ್ ಗೌಳೇರ್


ಗುಜರಾತ್–ರಾಜಸ್ಥಾನದ ಗಡಿಯಲ್ಲಿ ಹಬ್ಬಿ ನಿಂತಿರುವ ಅರಾವಳಿ ಪರ್ವತ ಶ್ರೇಣಿಗಳಲ್ಲಿ ಒಮ್ಮೆ ಧಾರಾಕಾರವಾಗಿ ಮಳೆ ಸುರಿದರೆ ಸಾಕು ಝರಿ, ತೊರೆ, ಜಲಪಾತಗಳು ಧುಮ್ಮಿಕ್ಕಿ ನದಿ–ಸರೋವರಗಳು ತುಂಬಿ ತುಳುಕುತ್ತವೆ. ಹಚ್ಚ ಹಸುರಿನ ಆ ಕಣಿವೆಯಲ್ಲಿ ಬಾಣಸ್ ನದಿ ಹರಿಯುವ ದೃಶ್ಯವಂತೂ ನೋಡಲು ಬಲು ರೋಚಕ.

ಅಬು ಪರ್ವತಗಳ ವ್ಯಾಪ್ತಿಯಲ್ಲಿ ಕೋಟೆ ಕೊತ್ತಲ, ದಿಲ್ವಾರ ಜೈನ ದೇವಸ್ಥಾನ, ಅಖಿಲೇಶ್ವರ ಮಂದಿರ, ಟ್ರೆವರ್ ಟ್ಯಾಂಕ್, ಟಾಡ್‌ರಾಕ್, ಗುರುಶಿಖರ ಮುಂತಾದ ಇತಿಹಾಸ ಪ್ರಸಿದ್ಧ ಪ್ರವಾಸಿತಾಣಗಳೊಂದಿಗೆ, ಕಣ್ಮನ ತಣಿಸುವ ನಕ್ಕಿ ಸರೋವರ ಪ್ರವಾಸಿಗರಿಗೆ ಪ್ರಮುಖ ಆಕರ್ಷಣೆ.

ಅರ್ಬುದ, ಅರ್ಬುದಾಂಚಲ್ ಹೆಸರುಗಳಿಂದ ಖ್ಯಾತಿ ಪಡೆದಿರುವ ಅಬು ಪರ್ವತದಲ್ಲಿ ಸುತ್ತಾಡುವಾಗ ಗಮನಸೆಳೆದಿದ್ದು ಅತಿ ಸುಂದರವಾದ ಈ 'ನಕ್ಕಿ ಸರೋವರ'. ರಾಜಸ್ಥಾನದಂಥ ಮರಳುಗಾಡಿನ ಪ್ರದೇಶದಲ್ಲಿ ನೀರಿನ ಸೆಲೆ ಉಕ್ಕಿದ್ದಾದರೂ ಹೇಗೆಂಬುದೇ ಅಚ್ಚರಿಯ ಸಂಗತಿ.

ಈ ಸರೋವರದ ಹಿಂದೆ ಪುರಾಣದ ಕಥೆ ತಳುಕು ಹಾಕಿಕೊಂಡಿದೆ. ರಸಿಯಾ ಬಾಲಮ್ ಎಂಬ ತರುಣ ಕನ್ಯಾಕುಮಾರಿ ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದ. ಯುವತಿಯ ತಂದೆ ತಾಯಿಗೆ ಇವರ ಪ್ರೇಮ ಒಪ್ಪಿಗೆಯಿರಲಿಲ್ಲ. ಒಂದು ದಿನ, ಹುಡುಗಿಯ ತಂದೆ ಮಹಾರಾಜ ಊರಿನಲ್ಲಿ ಡಂಗೂರ ಸಾರಿಸಿದ. ಯಾರು ಒಂದು ರಾತ್ರಿಯೊಳಗೆ ತಮ್ಮ ಉಗುರುಗಳಿಂದ ಕೆರೆ ನಿರ್ಮಾಣ ಮಾಡುತ್ತಾರೋ ಅವರಿಗೆ ತನ್ನ ಮಗಳನ್ನು ಕೊಡುವುದಾಗಿ ಘೋಷಣೆ ಮಾಡಿದ. ಆ ವಿಷಯ ರಸಿಯಾ ಬಾಲಮ್‌ಗೆ ತಿಳಿದು ಸವಾಲನ್ನು ಸ್ವೀಕರಿಸಿದ. ತನ್ನ ಉಗುರುಗಳಿಂದ ಒಂದು ರಾತ್ರಿಯೊಳಗೆ ಕೆರೆ ನಿರ್ಮಾಣ ಮಾಡಿದ. ಉಗುರಿನಿಂದ ಸೃಷ್ಟಿಯಾದ ಆ ಸರೋವರವೇ ಇಂದಿನ ನಕ್ಕಿ (ಉಗುರು) ಸರೋವರ.

ಸುಮಾರು 3 ಕಿ.ಮೀ. ಸುತ್ತಳತೆಯ ನಕ್ಕಿ ಸರೋವರ ಇಂದಿಗೂ ಊರಿನ ಜನ ಜಾನುವಾರುಗಳಿಗೆ ನೀರೊದಗಿಸುತ್ತಿದೆ.



ಟಾಡ್ ರಾಕ್

ಸಂಜೆಯಾಗುತ್ತಿದ್ದಂತೆ ಸರೋವರದ ಸುತ್ತ ಜನ ಜಾತ್ರೆಯೇ ನೆರೆಯುತ್ತದೆ. ಮೋಟರ್ ಬೋಟ್, ಯಾಚ್‌ಗಳು ಬಿಡುವಿಲ್ಲದೆ ಸರೋವರದಲ್ಲಿ ಸುತ್ತು ಹೊಡೆಯುತ್ತವೆ. ಹತ್ತಾರು ಪುಟಿಯುವ ಕಾರಂಜಿಗಳಂತೂ ಮಕ್ಕಳ ಮನ ಸೆಳೆಯುತ್ತವೆ. ಕುದುರೆ ಸವಾರಿ, ಕಯಾಕಿಂಗ್, ಚಾರಣಿಗರಿಗೂ ಇಲ್ಲಿ ಕೊರತೆ ಇಲ್ಲ.

ನಕ್ಕಿ ಸರೋವರದ ಮತ್ತೊಂದು ವಿಶೇಷತೆ ಟಾಡ್ ರಾಕ್ (Tod Rock). ಈ ಕಪ್ಪು ಏಕಶಿಲಾ ಬಂಡೆಯನ್ನು ನೋಡಬೇಕೆಂದರೆ ಬೆಟ್ಟ ಏರಬೇಕು. ದೂರದಿಂದ ನೋಡಿದರೆ ಕಪ್ಪೆ ಸರೋವರಕ್ಕೆ ಜಿಗಿಯುವಂತೆ ಭಾಸವಾಗುವ ಬಂಡೆಯಿದು.

ಬ್ರಿಟಿಷ್ ಸೈನ್ಯಾಧಿಕಾರಿ ಕರ್ನಲ್‌ಟಾಡ್ ಎಂಬುವವರು ಅಬು ಪರ್ವತವನ್ನು ಮೊದಲ ಬಾರಿ ಪತ್ತೆ ಮಾಡಿದ್ದರಂತೆ. ಅವರ ನೆನಪಿಗಾಗಿ ಬೃಹತ್ ಶಿಲಾ ಬಂಡೆಗೆ ಅವರ ಹೆಸರು ಇಡಲಾಗಿದೆ. ಹಾಗೆಯೇ ಇಂಗ್ಲಿಷ್ ಭಾಷೆಯಲ್ಲಿ ಟಾಡ್ (Toad) ಎಂಬುದಕ್ಕೆ ಉಭಯವಾಸಿ ಕಪ್ಪೆ ಎಂಬರ್ಥವಿದೆ. ನಕ್ಕಿ ಸರೋವರದ ಪಶ್ಚಿಮದಲ್ಲಿ ಸನ್‌ಸೆಟ್ ಪಾಯಿಂಟ್ ತಲುಪಿ ಕೆಳಗಿಳಿಯುವಷ್ಟರಲ್ಲಿ ಸಂಜೆ ಆಗಿತ್ತು. ಅಲ್ಲೇ ಗಾಂಧಿ ಘಾಟ್ ಹೆಸರಿನ ಬೋರ್ಡ್ ಕಂಡಿತು. ಗಾಂಧೀಜಿ ತೀರಿ ಹೋದ ನಂತರ ಅವರ ಚಿತಾಭಸ್ಮವನ್ನು 1948ರ ಫೆಬ್ರುವರಿ 12ರಂದು ನಕ್ಕಿ ಸರೋವರದಲ್ಲಿ ಲೀನಗೊಳಿಸಿದರಂತೆ. ಇಂದಿಗೂ ಗಾಂಧಿ ಘಾಟಿನಲ್ಲಿ ಜನ ಪುಣ್ಯಸ್ನಾನ ಮಾಡುತ್ತಾರೆ. 'ರಾಜಸ್ಥಾನದಲ್ಲಿ ನೀರಿಲ್ಲ ನೆರಳಿಲ್ಲ, ಬರಿ ಬಿಸಿಲು' ಎನ್ನುವವರಿಗೆ ಇಂಥ ತಂಪು ತಾಣಗಳು ಅಚ್ಚರಿ ಮೂಡಿಸುತ್ತವೆ.

ಪ್ರತಿಕ್ರಿಯಿಸಿ: feedback@sudha.co.in